# ಶಿವಮೊಗ್ಗ ಮಹಾನಗರಪಾಲಿಕೆ, ಶಿವಮೊಗ್ಗ

## ಶಿವಮೊಗ್ಗ ನಗರ ಆಶ್ರಯ ಸಮಿತಿ

### -: ಪ್ರಕಟಣೆ :-

**ಸಂ:ಮನಪಾ /ಆಶ್ರಯ/ಜಿ+2/02/2017-18** **ದಿನಾಂಕ: 27-02-2018**

ಶಿವಮೊಗ್ಗ ನಗರದ ನಿವೇಶನರಹಿತರಿಗೆ ಗೋವಿಂದಾಪುರ ಹಾಗೂ ಗೋಪಿಶೆಟ್ಟಿಕೊಪ್ಪ ಗ್ರಾಮಗಳಲ್ಲಿ ಜಿ+2 ಮಾದರಿಯ ಮನೆಗಳನ್ನು ಹಂಚುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ (Online) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ, 8941 ಅರ್ಜಿದಾರರು ಆನ್-ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದ್ದು, ಒಟ್ಟು 5168 ಅರ್ಜಿದಾರರು ನಿಗಧಿತ ಶುಲ್ಕವನ್ನು ಪಾವತಿಸಿರುತ್ತಾರೆ. ಅರ್ಜಿದಾರರ ಪ್ರಾಥಮಿಕ ಮಾಹಿತಿಯೊಂದಿಗೆ ಅರ್ಜಿದಾರರ BPL ಪಡಿತರ ಚೀಟಿ, ಜಾತಿ ಪ್ರಮಾಣಪತ್ರ, ಆದಾಯ ಪ್ರಮಾಣಪತ್ರದ ಮಾಹಿತಿಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕೃತ ಜಾಲತಾಣದ ಮುಖಾಂತರವೇ ಪಡೆಯಲಾಗಿರುತ್ತದೆ. ಹಾಗೂ ಕಂದಾಯ ಶಾಖೆಯ ಕರವಸೂಲಿಗಾರರಿಂದ ಮೊಬೈಲ್ Dåಫ್ ಜಿಯೋ ಟ್ಯಾಗ್ ಮುಖಾಂತರ ಅರ್ಜಿದಾರರ ಭಾವಚಿತ್ರ, ಆಧಾರ್ ಮತ್ತು BPL ಪಡಿತರ ಚೀಟಿಯ ಭಾವಚಿತ್ರಗಳನ್ನು ಸ್ಥಳ ಪರಶೀಲನಾ ವರದಿಯ ಸಮಯದಲ್ಲಿ ಪಡೆಯಲಾಗಿದ್ದು ಈ ಎಲ್ಲಾ ಮಾಹಿತಿಯನ್ನು ಆಧರಿಸಿ, ಪರಿಶೀಲಿಸಿ ಸಿದ್ದಪಡಿಸಿರುವ 2017-18ನೇ ಸಾಲಿನ ಅರ್ಹ ಮತ್ತು ಅನರ್ಹನ್ನೊಳಗೊಂಡ  ನಿವೇಶನ ರಹಿತರ ಪಟ್ಟಿಯನ್ನು ಆಶ್ರಯ ಶಾಖೆಯ ಸೂಚನಾ ಫಲಕದಲ್ಲಿ ಹಾಗೂ shivamoggacitycorp.org ಜಾಲತಾಣದಲ್ಲಿ ಪ್ರಚುರ ಪಡಿಸುತ್ತಿದ್ದು. ಈ ಬಗ್ಗೆ ಅಕ್ಷೇಪಣೆಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಲಿಖಿತವಾಗಿ ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿ,ನಗರ ಆಶ್ರಯ ಸಮಿತಿ ಮಹಾನಗರಪಾಲಿಕೆ, ಶಿವಮೊಗ್ಗ ಇವರಿಗೆ ದಿನಾಂಕ:27-02-2018 ರಿಂದ ದಿನಾಂಕ:03-03-2018 ರ ಒಳಗೆ ಕಛೇರಿಯ ವೇಳೆಯಲ್ಲಿ ಸಲ್ಲಿಸಬಹುದಾಗಿದೆ. ದಿನಾಂಕ:03-03-2018ರ ನಂತರ ಬಂದ ಆಕ್ಷೇಪಣೆಗಳನ್ನು ಸ್ವೀಕರಿಸಿರುವುದಿಲ್ಲ.

**ಸಹಿ/-**
**ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿ**
**ನಗರ ಆಶ್ರಯ ಸಮಿತಿ ಮಹಾನಗರಪಾಲಿಕೆ, ಶಿವಮೊಗ್ಗ**

**ಸಹಿ/-**
**ಅಧ್ಯಕ್ಷರು ನಗರ ಆಶ್ರಯ ಸಮಿತಿ ಹಾಗೂ**
**ಶಾಸಕರು, ಶಿವಮೊಗ್ಗ. ನಗರ.**